7.	N.H. No. 48	179.71	341.93	512.15
	Total	1816.61	1917.95	2200.41

ವಿಷಯ : ಇಂಡಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಬಾಂದಾರಗಳಿಗೆ ಅನುದಾನ.

Q : 1781

ಶ್ರೀ ಮನೋಹರ ಯು. ಐನಾಪುರ (ಬಳ್ಳೊಳ್ಳಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇಂಡಿ ತಾಲ್ಲೂಕಿನ ಕೆಳಕಂಡ ಸಣ್ಣ ನೀರಾವರಿ ಬಾಂದಾರಗಳನ್ನು 1993-94ನೇ ಸಾಲಿನ ಜಿಲ್ಲಾಪರಿಷತ್ ಆಯವ್ಯಯದಲ್ಲಿ ಸೇರಿಸಲಾಗಿದೆಯೆ ಮತ್ತು ಈ ಕಾಮಗಾರಿಗಳಿಗೆ ಎಷ್ಟು ಅನುದಾನ ಒದಗಿಸಲಾಗಿದೆ;

1. ಇಂಡಿ ಚಡಚಣ ರಸ್ತೆ ಮೇಲೆ ಕಲ್ಲಾಳ ಬ್ಯಾರೇಜ್
2. ಕಪನಿಂಬರಗಿ ಹತ್ತಿರ ಕಪನಿಂಬರಗಿ ಬ್ಯಾರೇಜ್
3. ಮೈಲಾರ ಹತ್ತಿರ ಮೈಲಾರ ಬ್ಯಾರೇಜ್
4. ಚೋರಗಿ ಹತ್ತಿರ ಚೋರಗಿ ಬ್ಯಾರೇಜ್

ಡಾ ॥ ಆರ್. ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಕಪನಿಂಬರಗಿ ಮತ್ತು ಮೈಲಾರ ಹತ್ತಿರದ ಬ್ಯಾರೇಜುಗಳು 1993-94ನೇ ಸಾಲಿನ ಆಯವ್ಯಯದಲ್ಲಿ ತಲಾ 2 ಲಕ್ಷ ರೂ.ಗಳ ಅನುದಾನದೊಂದಿಗೆ ಸೇರಿಸಲಾಗಿದೆ. ಉಳಿದ 2 ಬ್ಯಾರೇಜುಗಳು ಆಯವ್ಯಯದಲ್ಲಿ ಸೇರಿಲ್ಲ.

ವಿಷಯ : ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ಚನ್ನಪಟ್ಟಣ ಉಪವಿಭಾಗಕ್ಕೆ ಅಗತ್ಯ ಸಾಮಗ್ರಿಗಳ ಸರಬರಾಜು.

Q : 1724

ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ಚನ್ನಪಟ್ಟಣ ಉಪವಿಭಾಗಕ್ಕೆ ಅಗತ್ಯ ಸಾಮಗ್ರಿಗಳನ್ನು ಸರಿಯಾಗಿ ಸರಬರಾಜು ಮಾಡದಿರುವುದು ಸರ್ಕಾರದ ಗಮನಕ್ಕೆ